**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ.**

**ಸಿ.ಸಿ ನಂಃ 551/2020**

| | | |
|---|---|---|
| ಸಾಕ್ಷಿಯ ಹೆಸರುಃ | ಬಸಲಿಂಗಪ್ಪ | ಪ್ರಾಸಾಃ 7 |
| ಗಂಡನ/ತಂದೆಯ ಹೆಸರುಃ | ಭೀಮಶಪ್ಪ | ಚಾಸಾಃ 8 |
| ವಯಸ್ಸುಃ | 35 ವರ್ಷ | ದಿಃ 15-12-2023 |
| ಉದ್ಯೋಗಃ | ಕೂಲಿಕೆಲಸ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ರಾಮಸಮುದ್ರ | |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ**

ಚಾಸಾಃ 1 ನನ್ನ ಚಿಕ್ಕಮ್ಮ. ಚಾಸಾಃ 4 ನನ್ನ ಚಿಕ್ಕಪ್ಪ. ಚಾಸಾಃ 5 ಮತ್ತು 6 ನನ್ನ ಅಣ್ಣ -ತಮ್ಮಂದಿರು. ನಗೆ ಚಾಸಾಃ 7 ಮತ್ತು 9 ರವರ ಪರಿಚಯವಿದೆ. ನನಗೆ ಆರೋಪಿತರ ಪರಿಚಯವಿದೆ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ನಾನು ಪೊಲಿಸರ ಮುಂದೆ ಯಾವುದೇ ಹೆಳಿಕೆಯನ್ನು ನೀಡಿರುವುದಿಲ್ಲ. ನಾನು ಯಾವುದೇ ಜಗಳವನ್ನು ನೋಡಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲವಾಗಿ ನುಡಿಯುತ್ತಿದ್ದುದರಿಂದ ಸರಕಾರಿ ಸಹಾಯಕ ಅಭಿಯೋಕರು ಪಾಟಿ ಸವಾಲಿಗಾಗಿ ಅವಕಾಶ ಕೋರಿದ್ದು ನ್ಯಾಯಾಲಯದ ಮುಂದಿರುವ ದಾಖಲಾತಿಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)**

ದಿನಾಂಕಃ 03-09-2020 ರಂದು ಚಾಸಾಃ 1, 4,ಮತ್ತು ಆರೋಪಿತರ ನಡುವೆ ಜಗಳವಾಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿತರು ಚಾಸಾಃ 1 ಮತ್ತು 4, 5, 6 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಜೀವ ಬೆದರಿಕೆಯನ್ನು ಹಾಕಿರುತ್ತಾರೆ ಎಂದರೆ ಸರಿಯಲ್ಲ. ಈಗ ನಿಪಿ-3 ರಂತೆ ವಿವರವಾಗಿ ಓದಿ ಹೇಳಲಾದ ಹೆಳಿಕೆಯನ್ನು ನಾನು ಪೊಲಿಸರ ಮುಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿ ಸವಾಲು ಃಆರೋಪಿತರ ಪರ ಶ್ರೀ. ಎಸ್.ಬಿ. ಎಚ್ . ವಕೀಲರಿಂದಃ ಇಲ್ಲ**

**ಮರುವಿಚಾರಣೆ : ಇರುವುದಿಲ್ಲ.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಜೆಎಂಎಫ್‌ಸಿ ನ್ಯಾಯಾಧೀಶರು**
**ಯಾದಗಿರಿ**

**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ.**

**ಸಿ.ಸಿ ನಂಃ 551/2020**

| | | |
|---|---|---|
| ಸಾಕ್ಷಿಯ ಹೆಸರುಃ | ಬಂಗಾರಮ್ಮ | ಪ್ರಾಸಾಃ 8 |
| ಗಂಡನ/ತಂದೆಯ ಹೆಸರುಃ | ಬಂಗಾರಪ್ಪ | ಚಾಸಾಃ 9 |
| ವಯಸ್ಸುಃ | 60 ವರ್ಷ | ದಿಃ 15-12-2023 |
| ಉದ್ಯೋಗಃ | ಮನೆಕೆಲಸ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ರಾಮಸಮುದ್ರ | |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ**

ನನಗೆ ಚಾಸಾಃ 1, 4 ರಿಂದ 8 ರವರ ಪರಿಚಯವಿದೆ. ನನಗೆ ಆರೋಪಿತರ ಪರಿಚಯವಿದೆ. ಸುಮಾರು 2 ವರ್ಷದ ಹಿಂದೆ ಜಗಳವಾಗಿರುತ್ತದೆ. ಸದರಿ ಜಗಳವು ನೀರಿನ ವಿಷಯವಾಗಿ ಆಗಿರುತ್ತದೆ. ಆರೋಪಿತರು ಎಲ್ಲರೂ ಕೂಡಿಕೊಂಡು ಬಂದು ಚಾಸಾಃ 4 ರವರಿಗೆ ಹೊಡೆ-ಬಡೆ ಮಾಡಿರುತ್ತಾರೆ. ನಾನು ಮತ್ತು ಚಾಸಾಃ 7, 8 ರವರು ಹೋಗಿ ಜಗಳವನ್ನು ಬಿಡಿಸಿರುತ್ತೇವೆ. ಸದರಿ ಆರೋಪಿತರು ಜೀವ ಬೆದರಿಕೆ ಹಾಕಿರುತ್ತಾರೆ. ಆರೋಪಿತರು ಕಲ್ಲು ಮತ್ತು ಬಡಿಗೆಯಿಂದ ಚಾಸಾಃ 1 ಮತ್ತು 4 ರವರಿಗೆ ಹೊಡೆದಿರುತ್ತಾರೆ. ಸದರಿ ಸಾಕ್ಷಿಯು ಮು. ಮಾ. ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಸಾಕ್ಷಿಯು ಭಾಗಶಃ ಪ್ರತಿಕೂಲವಾಗಿ ನುಡಿಯುತ್ತಿದ್ದುದರಿಂದ ಸರಕಾರಿ ಸಹಾಯಕ ಅಭಿಯೋಕರು ಪಾಟಿ ಸವಾಲಿಗಾಗಿ ಅವಕಾಶ ಕೋರಿದ್ದು ನ್ಯಾಯಾಲಯದ ಮುಂದಿರುವ ದಾಖಲಾತಿಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)**

ಸದರಿ ಜಗಳವು ಮುಂಜಾನೆ 9.00 ಗಂಟೆಗೆ ಆಗಿರುತ್ತದೆ ಎಂದರೆ ಸರಿ. ಸದರಿ ಆರೋಪಿತರು ಎಲ್ಲರೂ ಸೇರಿ ಹೊಡೆದಿರುತ್ತಾರೆ ಎಂದರೆ ಸರಿ. ಆರೋಪಿತರು ಎಲ್ಲರೂ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿ.

**ಪಾಟಿ ಸವಾಲು ಃಆರೋಪಿತರ ಪರ ಶ್ರೀ. ಎಸ್.ಬಿ. ಎಚ್. ವಕೀಲರಿಂದ**

ನಾವು ಮತ್ತು ಆರೋಪಿತರು ಸಂಬಂಧಿಕರು ಎಂದರೆ ಸರಿ. ಜಗಳವಾದಾಗ ನಾನು ಮನೆಯಲ್ಲಿದ್ದೆ. ಹೊಡೆಯುವಾಗ ನಾನು ಇರಲಿಲ್ಲ ಎಂದರೆ ಸಾಕ್ಷಿಯು ಜಗಳವಾಗುವಾಗ ನಾನು ನಿಂತಿದ್ದೆ ಎಂದು ನುಡಿಯುತ್ತಾರೆ. ಸದರಿ ಜಗಳವಾದಾಗ ಜಾಸ್ತಿ ಜನ ಸೇರಿದ್ದರು ಅವರು ಯಾರು ಎಂದು ಹೇಳಲು ನನಗೆ ಬರುವುದಿಲ್ಲ. ಮು. ಮಾ. ಗಳು ಎಲ್ಲಾ ಕಡೆ ಸಿಗುತ್ತವೆ ಎಂದರೆ ಸಾಕ್ಷಿಯು ಜಗಳದಲ್ಲಿ ಇವೆ ಇದ್ದವು ಎಂದು ನುಡಿಯುತ್ತಾರೆ. ಸದರಿ ಮು.ಮಾ. ಯಾರ ಕೈಯಲ್ಲಿತ್ತು ಎಂದರೆ ಸಾಕ್ಷಿಯು ಜನಗಳು ಹೆಚ್ಚು ಇರುವುದರಿಂದ ಎಲ್ಲರ ಕೈಯಲ್ಲಿ ಇತ್ತು ಎಂದು ನುಡಿಯುತ್ತಾರೆ. ನಾನು ಚಾಸಾಃ 1 ರವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿತರು ಮತ್ತು ಚಾಸಾಃ 1 ರವರ ನಡುವೆ ಮೋರಿ ನೀರಿನ ಸಲುವಾಗಿ ಜಗಳವಾಗಿರುತ್ತದೆ ಎಂದರೆ ಸರಿ. ಸದರಿ ಹೇಳಿಕೆಯನ್ನು ಪೋಲಿಸರು ಬರೆದಿರುತ್ತಾರೆ. ಸದರಿ ಹೇಳಿಕೆಯ ಬಗ್ಗೆ ನನಗೆ ಹೇಳಿರುವುದಿಲ್ಲ. ಸದರಿ ಬಡಿಗೆಯಿಂದ ಹೊಡೆದಿರುವಾಗ ರಕ್ತ ಬಂದಿರುತ್ತದೆಯಾ? ಎಂದರೆ ಸಾಕ್ಷಿಯು ಮೂಗು ಪೆಟ್ಟಾಗಿರುತ್ತದೆ ಎಂದು ನುಡಿಯುತ್ತಾರೆ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಕೂಡ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇರುವುದಿಲ್ಲ.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಜೆಎಂಎಫ್‌ಸಿ ನ್ಯಾಯಾಧೀಶರು**
**ಯಾದಗಿರಿ**